

## ಪಾದರಕ್ಷೆಗಳಿಗೂ ದೇವಸ್ಥಾನ

ದೇವಸ್ಥಾನವೆಂದರೆ, ಅಲ್ಲೊಂದು ದೇವರ ವಿಗ್ರಹವಿರುವುದು ವಾಡಿಕೆ. ಆದರೆ ರಾಯಚೂರು ಜಿಲ್ಲೆಯ ಗಾಣಧಾಳ ಗ್ರಾಮದ ಹತ್ತಿರವಿರುವ 'ಪಂಚಮುಖಿ' ಆಂಜನೇಯ ಗುಡಿ ಬದಿಯ ದೇವಸ್ಥಾನದಲ್ಲಿ ಇಣುಕಿ ನೋಡಿದರೆ ವಿಗ್ರಹದ ಬದಲಾಗಿ ಪಾದರಕ್ಷೆಗಳು ಕಂಡು ಬರುತ್ತವೆ. ಇವು ಆಂಜನೇಯನ ಪಾದರಕ್ಷೆಗಳೆಂದು ಜನ ಭಕ್ತಿ ಭಾವದಿಂದ ಪೂಜೆಗೈಯುತ್ತಾರೆ.

—ನಾರಾಯಣ ಬಾಬಾನಗರ, ವಿಜಾಪುರ

## ಕೃಷ್ಣ ದೇಗುಲ ಕೊರಂಗಳ

ದಕ್ಷಿಣಕನ್ನಡ ಜಿಲ್ಲೆಯ ಪುರಾತನ ಸುಂದರ ಶಿಲ್ಪಕಲಾ ಪ್ರಸಿದ್ಧಿಯ ಕೊರಂಗಳ ಕೃಷ್ಣ ದೇವಾಲಯ ಬೆಳ್ತಂಗಡಿ ತಾಲ್ಲೂಕು, ಹೊಸಂಗಡಿ ಗ್ರಾಮ ಪೆರಿಂಜೆಯ ಪ್ರಕೃತಿ ಸೌಂದರ್ಯದ ಪ್ರಶಾಂತ ಪರಿಸದಲ್ಲಿ ನೆಲೆಗೊಂಡಿದೆ. ಈ ದೇವಾಲಯವು ಬೆಳ್ತಂಗಡಿ–ಮೂಡಬಿದ್ರೆ ರಸ್ತೆಯ ಪಕ್ಕದಲ್ಲಿದ್ದು, ಇದು ಕೃಷ್ಣನ ಪುಣ್ಯ ಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿ ಆರಾಧನ ದೇವರು ಕೃಷ್ಣ ತನ್ನ ಎರಡು ಕೈಗಳಲ್ಲಿ ಕೊಳಲನ್ನು ಹಿಡಿದು ಎಡ ಮತ್ತು ಬಲಕೈಗಳಲ್ಲಿ ಶಂಖ ಮತ್ತು ಚಕ್ರ ಹಿಡಿದು ಮನಮೋಹಕ ಭಂಗಿಯಲ್ಲಿ ನಿಂತಿದ್ದು, ನೋಡಲು ತುಂಬಾ ಸುಂದರವಾಗಿದೆ. ದೇವರ ಎಡ ಮತ್ತು ಬಲ ಭಾಗದಲ್ಲಿ ಇರುವ ಶ್ರೀದೇವಿ ಮತ್ತು ಭೂದೇವಿಯರ ಮೂರ್ತಿ ಆಕರ್ಷಕವಾಗಿವೆ. ಗರ್ಭಗುಡಿಯು ಪುರಾತನದಲ್ಲಿ ನಿರ್ಮಾಣಗೊಂಡು ಶಿಲಾಮಯವಾಗಿದೆ. ಮೇಲ್ಛಾವಣಿಯೂ ಶಿಲಾಮಯವಾಗಿದೆ. ಸುಂದರ ಕೆತ್ತನೆಗಳಿಂದ ಕೂಡಿದೆ. ದೇವಾಲಯದ ಮುಂಭಾಗದಲ್ಲಿ ಸುಂದರವಾದ ಪುಷ್ಕರಣಿ ಇದೆ.

—ಕೆ. ನಾರಾಯಣ ಭಟ್, ಪೆರಿಂಜೆ





## ಚಾಕ್‌ಪೀಸ್‌ನಿಂದ ಸೂಕ್ಷ್ಮ ಕೆತ್ತನೆ

ಬೆಂಗಳೂರಿನ ಇಂಜಿನಿಯರ್ ಸಚಿನ್ ಸಾಂಘೆ ಅವರು ಚಾಕ್‌ಪೀಸ್‌ನಲ್ಲಿ ವಿವಿಧ ಸೂಕ್ಷ್ಮ ಕೆತ್ತನೆಗಳನ್ನು ಕೆತ್ತಿ ನೋಡುಗರನ್ನು ಚಕಿತಗೊಳಿಸಿದ್ದಾರೆ. ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು, ದೇವತೆಗಳನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು, ಗಣ್ಯ ವ್ಯಕ್ತಿಗಳನ್ನು, ಪ್ರಾಣಿ ಪಕ್ಷಿಗಳನ್ನು ಸುಮಾರು ಸಾವಿರಕ್ಕೂ ಹೆಚ್ಚು ಕೆತ್ತನೆಗಳನ್ನು ಮಾಡಿದ್ದಾರೆ. ಸಾಕಷ್ಟು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

—ಈರಣ್ಣ ಬೆಂಗಾಲಿ, ರಾಯಚೂರು